USN

17KKM39/49

Question Paper Version : A

ACHARYA INSTITUTE OF TECHNOLOGY Library Date........ BANGALORE

# Third/Fourth Semester B.E. Degree Examination, Dec.2019/Jan.2020

# ಕನ್ನಡ ಮನಸು [Kannada Manasu]

## (COMMON TO ALL BRANCHES)

Time: 2 hrs.] [Max. Marks: 30

### ಸೂಚನೆಗಳು

1. ಎಲ್ಲ ೩೦ ಪ್ರಶ್ನೆಗಳಿಗೂ ಉತ್ತರಿಸಿರಿ. ಪ್ರತಿ ಪ್ರಶ್ನೆಗೆ **ಒಂದು ಅಂಕ.**
2. **ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ಯು.ಎಸ್.ಎನ್ ಸಂಖ್ಯೆ ಹಾಗೂ ಪಶ್ನೆ ಪತ್ರಿಕೆಯ ಶ್ರೇಣಿಯನ್ನು ಅಂದರೆ ಅ, ಬ, ಕ ಅಥವಾ ಡ ಯನ್ನು ತಪ್ಪಿಲ್ಲದಂತೆ ಕಡ್ಡಾಯವಾಗಿ ಗುರುತಿಸುವುದು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ.**
3. ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿಮಾಡದೆ ಹಾಗೆಯೇ ಬಿಟ್ಟಲ್ಲಿ ಅಥವಾ ಭರ್ತಿಮಾಡಿದ ಮಾಹಿತಿಯಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು ರದ್ದು ಪಡಿಸಲಾಗುವುದು.
4. ಕೇವಲ ಒಂದು ಉತ್ತರವನ್ನು ಮಾತ್ರ ಉತ್ತರ ಪತ್ರಿಕೆಯಲ್ಲಿ ಗುರುತಿಸತಕ್ಕದ್ದು. ಒಂದೆ ಪ್ರಶ್ನೆಗೆ ಎರಡು ಉತ್ತರವನ್ನು ಗುರುತಿಸುವುದು ಅಮಾನ್ಯ.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾದ ಓ.ಎಂ.ಆರ್ ಉತ್ತರ ಪತ್ರಿಕೆಯ ಹಾಳೆಯ ಮೇಲೆ **ಕಪ್ಪು ಅಥವಾ ನೀಲಿ ಶಾಹಿಯ ಬಾಲ್‌ಪಾಯಿಂಟ್ ಪೆನ್ನಿನಿಂದ ಗುರುತು ಮಾಡಬೇಕು.**

---

1. 'ಶ್ರಾವಣ' ಕವನದಲ್ಲಿ ಕವಿ ಸೌಂದರ್ಯ ಯಾವುದಕ್ಕೆ ಸಂಬಂಧಿಸಿದೆ?
   ಅ) ನಿಸರ್ಗಕ್ಕೆ ಬ) ಬೆಂಗಳೂರಿಗೆ ಕ) ಬೆಳಗಾವಿಗೆ ಡ) ಕಾಲೇಜಿಗೆ

2. ಕನ್ನಡದ ಪ್ರಸಿದ್ದ ಲೇಖಕರಾದ 'ಶ್ರೀ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರ' ಕಾವ್ಯನಾಮ
   ಅ) ರಾಶಿ ಬ) ಕುವೆಂಪು ಕ) ವಿನಾಯಕ ಡ) ಅಂಬಿಕಾತನಯದತ್ತ

3. 'ಬೆಣ್ಣೆ ಹಚ್ಚು' ಪದದ ಅರ್ಥ
   ಅ) ರೊಟ್ಟಿಗೆ ಬೆಣ್ಣೆ ಹಚ್ಚುವುದು ಬ) ವಿಡಂಬನೆ
   ಕ) ಹೊಗಳುವುದು ಡ) ದೋಸೆಗೆ ಬೆಣ್ಣೆ ಹಚ್ಚುವುದು

4. ಶ್ರೀ ವಿಶ್ವೇಶ್ವರಯ್ಯನವರ ವ್ಯಕ್ತಿತ್ವಕ್ಕೆ ಯಾವುದು ಸರಿಹೊಂದಿಕೊಳ್ಳುತ್ತದೆ?
   ಅ) ಶಿಸ್ತು ಬ) ತರ್ಕಬದ್ಧವಾದ ಆಲೋಚನೆ
   ಕ) ನ್ಯಾಯ ಪರತೆ ಡ) ಮೇಲಿನ ಎಲ್ಲವು

5. ಶ್ರೀ ಶಿವರಾಮ ಕಾರಂತರ 'ದೋಣಿ – ಹರಿಗೋಲುಗಳಲ್ಲಿ'ಲೇಖನ ಈ ರೀತಿಯಾಗಿದೆ :
   ಅ) ಪ್ರವಾಸ ಕಥನ ಬ) ಹಾಸ್ಯ ಲೇಖನ
   ಕ) ಯಕ್ಷಗಾನ ಸಂಭಾಷಣೆ ಡ) ಬಂಢಾಯ ಲೇಖನ

6. ಶ್ರೀ ವಿಶ್ವೇಶ್ವರಯ್ಯನವರು ಸ್ಥಾಪಿಸಿದ ಬ್ಯಾಂಕ್
ಅ) ಪಂಜಾಬ್ ನ್ಯಾಷನಲ್ ಬ್ಯಾಂಕ್ ಬ) ಮೈಸೂರು ಬ್ಯಾಂಕ್
ಕ) ಕೆನರಾ ಬ್ಯಾಂಕ್ ಡ) ವಿಜಯಾ ಬ್ಯಾಂಕ್

7. ಶ್ರೀ ವಿಶ್ವೇಶ್ವರಯ್ಯನವರು ಭಾಷಣಕ್ಕೆ ಪೂರಕವಾಗಿ
ಅ) ಶ್ರೋತೃ ವರ್ಗಕ್ಕೆ ಗೌರವ
ಬ) ಸರಿಯಾದ ತಯಾರಿ
ಕ) ಮಾತಿನ ಮಂಟಪದಲ್ಲಿ ಜನರನ್ನು ಮರಳುಗೊಳಿಸುವುದು
ಡ) ಸತ್ಯ ಸಂಗತಿಗಳು

8. 'ಸುಖ' ಪದಕ್ಕೆ ಸಮಾನಾರ್ಥಕ ಜೋಡಿಪದ :
ಅ) ನಲಿವು ಬ) ದು:ಖ ಕ) ಒಲವು ಡ) ಸಂತೋಷ

9. 'ನಮ್ಮ ಎಮ್ಮೆಗೆ ಮಾತು ತಿಳಿಯುವುದೇ' ಇದೊಂದು :
ಅ) ಹಾಸ್ಯ ಬರಹ ಬ) ಬಂಧಾಯ ಲೇಖನ
ಕ) ಹಾಲು ಮಾರುವವನ ಕಥೆ ಡ) ಪ್ರವಾಸ ಕಥನ

10. ಸಚಿವ + ಆಲಯ = ಸಚಿವಾಲಯ: ಕನ್ನಡ ವ್ಯಾಕರಣದಂತೆ ಇಲ್ಲಿರುವ ಸಂಧಿ:
ಅ) ಸುವರ್ಣ ಸಂಧಿ ಬ) ಸವರ್ಣಧೀರ್ಘಸಂಧಿ
ಕ) ವೃದ್ಧಿ ಸಂಧಿ ಡ) ಲೋಪ ಸಂಧಿ

11. ಕನ್ನಡಕ್ಕೆ ದೊರೆಕಿರುವ ಜ್ಞಾನಪೀಠ ಪ್ರಶಸ್ತಿಗಳು :
ಅ) ೯ ಬ) ೫ ಕ) ೮ ಡ) ೧೦

12. ಕನ್ನಡ ಬರವಣಿಗೆಯ ಕುರಿತು ಇರಬೇಕಾದದ್ದು :
ಅ) ಕೀಳರಿಮೆ ಬ) ಅನಾದರ ಕ) ಅನಾಸಕ್ತಿ ಡ) ಆಸಕ್ತಿ

13. 'ರೊಟ್ಟಿ ಮತ್ತು ಕೋವಿ' ಕವನದಲ್ಲಿ ನಾಡಿನ ಸಂಪತ್ತನ್ನು ಸೃಷ್ಟಿಸುವವರು
ಅ) ದುಡಿವ ಜನ ಬ) ಬಂಡವಾಳ ಶಾಹಿಗಳು
ಕ) ಭಾಷಣಕಾರರು ಡ) ಭಟ್ಟಂಗಿಗಳು

14. "ಒರೆ ಹತ್ತಿ ಉರಿದೆಡೆ ನಿಲಬಹುದಲ್ಲದೇ, ಧರೆ ಹತ್ತಿ ಉರಿದರೆ ನಿಲಬಾರದು, ಏರಿ ನೀರುಂಬಡೆ, ಬೇಲಿ ಹೊಲವ ಮೇವೊಡೆ, ನಾರಿ ತನ್ನ ಮನೆಯಲ್ಲಿ ಕಳುವೊಡೆ ......... ಇನ್ನಾರಿಗೆ ದೂರುವೇ? ಕೂಡಲಸಂಗಮದೇವಾ" ಈ ವಚನದ ರಚನೆಕಾರರು
ಅ) ಸರ್ವಜ್ಞ ಬ) ಬಸವಣ್ಣ ಕ) ಅಲ್ಲಮ ಪ್ರಭು ಡ) ಅಕ್ಕ ಮಹಾದೇವಿ

15. 'ಎಲ್ಲ ಹುಡಿಗಿಯರ ಕನಸು' ಪದ್ಯದಲ್ಲಿ ಕವನದಲ್ಲಿ ನಾಯಕಿಯು ತನ್ನ -------- ನ ಮುಂದೆ ತನಗೆ ರಾತ್ರಿ ಬಿದ್ದ ಕನಸನ್ನು ಹೇಳಿಕೊಳ್ಳುತ್ತಾಳೆ.
ಅ) ಗೆಳತಿ ಬ) ತಂಗಿ ಕ) ಅವ್ವ ಡ) ಅಕ್ಕ

16. 'ಬೆಂಕ್ರ ಮೇಸ್ತ್ರಿ ಮತ್ತು ಅರಿಸ್ಟಾಟಲ್' ಲೇಖನ ಯಾವ ರೀತಿಯಾಗಿದೆ?
ಅ) ವಿನೋದ ಬರಹ ಬ) ಪ್ರವಾಸ ಕಥನ
ಕ) ಬಂಢಾಯ ಲೇಖನ ಡ) ಪರಿಸರ ಲೇಖನ

17. ಜಸ್ಟಿಸ್ (justice) ಗೆ ಸರಿಯಾದ ಕನ್ನಡ ಪದ:
ಅ) ನ್ಯಾಯಾಧೀಶ ಬ) ಕುಲಪತಿ ಕ) ರಾಜ್ಯಪಾಲ ಡ) ರಾಷ್ಟ್ರಪತಿ

18. ಶ್ರೀ ಸಿದ್ದಲಿಂಗಯ್ಯನವರ 'ಬೆಲ್ಚಿಯ ಹಾಡು' ಕವನ ಏನನ್ನು ಪ್ರತಿಪಾದಿಸುತ್ತದೆ?
ಅ) ಗೆಳೆತನದ ಮಹತ್ವ ಬ) ದಲಿತರ ಕನಸು
ಕ) ಪ್ರೇಮದ ರಮ್ಯತೆ ಡ) ಭಕ್ತಿಯ ಪರವಶತೆ

19. 'ಬಂದೇ ನವಾಜ್' ಯಾರು?
ಅ) ಗಣಿಧಣಿಗಳು ಬ) ಯೋಗ ಗುರು
ಕ) ಸೂಫಿ ಸಂತರು ಡ) ವಜ್ರದ ವ್ಯಾಪಾರಿಗಳು

20. ಶ್ರೀ ಬಿ.ಜಿ.ಎಲ್. ಸ್ವಾಮಿಯವರ 'ಆನೆಹಳ್ಳದಲ್ಲಿ ಹುಡುಗಿಯರು' ಲೇಖನ ಯಾರ ಶೈಕ್ಷಣಿಕ ಪ್ರವಾಸದ ಕುರಿತಾಗಿದೆ?
ಅ) ತಾಂತ್ರಿಕ ವಿದ್ಯಾರ್ಥಿಗಳ ಪ್ರವಾಸ
ಬ) ವೈದ್ಯಕೀಯ ವಿದ್ಯಾರ್ಥಿಗಳ ಚಾರಣ
ಕ) ಗೆಳೆಯ ಗೆಳತಿಯರ ಚಾರಣ
ಡ) ಸಸ್ಯ ವೀಕ್ಷಣೆ ಹಾಗೂ ಸಸ್ಯ ಸಂಗ್ರಹಕ್ಕೆಂದು ಕಾಡಿಗೆ ಕರೆದುಕೊಂಡು ಹೋದ ಶೈಕ್ಷಣಿಕ ಪ್ರವಾಸ

21. ಶ್ರೀ ಮಂಟೆಸ್ವಾಮಿ ಯಾವುದಕ್ಕೆ ಸರಿಹೊಂದುತ್ತಾರೆ?
ಅ) ಮೈಸೂರು – ಮಂಡ್ಯ ಸೀಮೆಯ ಕೆಳವರ್ಗದ ಸಮುದಾಯದಲ್ಲಿ ಜನಪ್ರಿಯರಾಗಿರುವ ಸಂತ
ಬ) ಯೋಗ ಗುರು
ಕ) ಬೆಳಗಾವಿ ಜಿಲ್ಲೆಯ ಸಂತರು
ಡ) ಯಕ್ಷಗಾನ ಕಲಾವಿದರು

22. 'ಮೂಡಣ' ಪದದ ವಿರುದ್ಧಾರ್ಥಕ ಪದ :
ಅ) ತೆಂಕಣ ಬ) ಪಡುವಣ ಕ) ಕೊಂಕಣ ಡ) ಬಡಗಣ

23. "ಶ್ರೀ ಎ.ಆರ್ ರೆಹಮಾನರ ಹಾಡಿನ ಕಂಪೋಝಿಶನ್ ತುಂಬಾ ಚೆನ್ನಾಗಿದೆ". ಈ ವಾಕ್ಯದಲ್ಲಿ ಕಂಪೋಝಿಶನ್ ಗೆ ಸರಿಯಾದ ಕನ್ನಡದ ಪದ :
ಅ)ಧ್ವನಿ ಸಂಪತ್ತು ಬ) ನಿರ್ದೇಶನ ಕ) ಸಂಯೋಜನೆ ಡ) ಗಾಯನ

24. ವಿಶ್ವಮಾನವತೆ ಏನನ್ನು ಪ್ರತಿಪಾದಿಸುತ್ತದೆ?
ಅ) ಕಂದಾಚಾರ ಬ) ಭಾಷಾ ಕಲಹ
ಕ) ಮತೀಯ ದ್ವೇಷ ಡ) ಸಹಬಾಳ್ವೆ – ಸೌಹಾರ್ದ

25. ಮನವಿಗಳು ಮತ್ತು ವ್ಯವಹಾರಿಕ ಪತ್ರಗಳಲ್ಲಿ ಇರಬೇಕಾದದ್ದು :
ಅ) ನಿಖರ ಮಾಹಿತಿ ಬ) ಸೌಜನ್ಯ
ಕ) ನೇರ ನಿರೂಪಣೆ ಡ) ಮೇಲಿನ ಎಲ್ಲವೂ

26. ಕನ್ನಡ ಸಂಸ್ಕೃತಿ ಯಾವ ರೀತಿಯಲ್ಲಿದೆ?
ಅ) ವರ್ಣರಂಜಿತ ಬ) ಬಹುರೂಪಿ
ಕ) ಜೀವಂತ ಡ) ಮೇಲಿನ ಎಲ್ಲವನ್ನು ಒಳಗೊಂಡ ರೀತಿ

27. ಶ್ರೀ ಬಸವರಾಜ ಕುಕ್ಕರಹಳ್ಳಿಯವರ 'ನೀರು' ಲೇಖನ ಏನನ್ನು ಪ್ರತಿಪಾದಿಸುತ್ತದೆ?
ಅ) ಮಾನವ ಬದುಕಿಗೆ ನೀರಿನ ಮಹತ್ವ ಬ) ನೀರು ಕಲಹ ಸೃಷ್ಟಿಸಬಲ್ಲದು
ಕ) ನೀರನ್ನು ಹಂಚಿಕೊಂಡು ಬಳಸಬೇಕು ಡ) ಮೇಲಿನ ಎಲ್ಲವನ್ನು ಪ್ರತಿಪಾದಿಸುತ್ತದೆ

28. 'ಶ್ರೀ ಗುಬ್ಬಿ ವೀರಣ್ಣ' ಯಾವುದಕ್ಕೆ ಸಂಬಂಧಿಸಿದ್ದಾರೆ?
ಅ) ತೊಗಲು ಬೊಂಬೆಯಾಟ ಬ)ದೊಡ್ಡಾಟ
ಕ) ಯಕ್ಷಗಾನ ಡ) ನಾಟಕ ಕಂಪನಿ

29. ಡಾ ॥ ಬೆಸಗರ ಹಳ್ಳಿ ರಾಮಣ್ಣನವರ 'ಗಾಂಧಿ' ಕತೆ ಏನನ್ನು ಪ್ರತಿಪಾದಿಸುತ್ತದೆ?
ಅ) ವರ್ಣಾಶ್ರಮ ಪದ್ಧತಿ
ಬ) ಜಾತೀಯತೆ
ಕ) ಮೂಢ ನಂಬಿಕೆ
ಡ) ಮಹಾತ್ಮಾಗಾಂಧೀಜಿಯವರ ಮೌಲ್ಯಗಳಿಗೆ ಒದಗಿರುವ ಅವಸ್ಥೆಯನ್ನು

30. ಶ್ರೀ ವಿಶ್ವೇಶ್ವರಯ್ಯನವರ ಕತೃತ್ವ ಶಕ್ತಿಗೆ ಸಾಕ್ಷಿಯಾಗಿರುವುದು:
ಅ) ಮೈಸೂರು ಬ್ಯಾಂಕ್ ಬ) ಕೃಷ್ಣರಾಜ ಸಾಗರ ಆಣೆಕಟ್ಟು
ಕ) ಮೈಸೂರು ವಿಶ್ವವಿದ್ಯಾಲಯ ಡ) ಮೇಲಿನ ಎಲ್ಲವು

* * * * *

AY - AY - VTU-TR01-2020 08:51:16am 13-01-2020 09:13:31am AY - AY - AY - AY